ತಿರುಮಲೆ ತಿರುಪತಿ ದೇವಸ್ಥಾನಗಳು


ಬಾಲ

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜೂನ್ 2020

## ಸಪ್ತಗಿರಿ ಅನುಬಂಧ



ತಿರುಮಲೆ ಸ್ವಾಮಿಯವರ
ಪುಷ್ಕರಿಣಿ ಬಳಿಯಿರುವ ಆಲಯದಲ್ಲಿ
ಶ್ರೀ ವರಾಹಸ್ವಾಮಿಯವರು





ಶ್ರೀ ವಾದಿರಾಜ ಸ್ವಾಮಿಯವರನ್ನು
ಅಭಿನಯಿಸುತ್ತಿರುವ ಬಾಲಕಲಾಕಾರನು

ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಪ್ತಗಿರಿ ಅನುಬಂಧ



ಸಂಪುಟ -01 ಜೂನ್ - 2020 ಸಂಚಿಕೆ -04

## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ವರಾಹವತಾರ -ಶ್ರೀಮತಿ. ಬಿ. ಪದ್ಮಜ | 04 |
| ಹನ್ನೆರಡು ಆಳ್ವಾರರು | ತಿರುಮಳಿಶೈಯಾಳ್ವಾರ್ - ಶ್ರೀಮತಿ. ಸಿ.ಎಸ್. ಊರ್ಮಿಳಾ | 06 |
| ಕನ್ನಡ ಹರಿದಾಸವರೇಣ್ಯರು | ಶ್ರೀ ವಾದಿರಾಜರು - ಶ್ರೀಮತಿ. ಸುಧಾಮಧುಸೂದನ್ | 08 |
| ಚಿತ್ರಕಥೆ | ಸ್ವಾಮಿ ಪುಷ್ಕರಿಣಿ ಮಹಿಮೆ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಕೆ. ದ್ವಾರಕನಾಥ್ | 10 |
| ಬಾಲನೀತಿ | ಕದಲಿ ಕಲ್ಪವೃಕ್ಷ ಮತ್ತು ಕಾಮಧೇನು - ಬಿ. ಆರ್. ಶ್ರೀಕಂಠಯ್ಯ | 14 |
| ಪ್ರಜ್ಞಾವಂತ ಬಾಲಕ - ಯು.ಭರತ್ ಶರ್ಮ | | 16 |
| ಕ್ವಿಜ್ | -ಶ್ರೀಮತಿ. ಸೂರ್ಯವಂಶಿ | 17 |
| ಚಿತ್ರಲೇಖನ | | 18 |


ಮುಖಚಿತ್ರ - ಶ್ರೀ ವರಾಹಸ್ವಾಮಿಯವರು,ತಿರುಮಲೆ

ಹಿಂಬದಿಚಿತ್ರ - ಶ್ರೀ ಪೆರಿಯಾಳ್ವಾರ್ ( ಚಿತ್ರ )

# ವರಾಹಾವತಾರ

-ಶ್ರೀಮತಿ ಬಿ. ಪದ್ಮಜ



ಮಕ್ಕಳೇ! ನಿಮಗಿದು ಗೊತ್ತೇ? ಶ್ರೀ ಮಹಾವಿಷ್ಣುವಿನ ದಶಾವತಾರಗಳಲ್ಲಿ ಮೂರನೆಯದು ಈ ವರಾಹವತಾರ. ಶ್ರೀ ಮಹಾವಿಷ್ಣುವು ಪ್ರತೀ ಬಾರಿಯೂ ಲೋಕಕ್ಕೆ ಏನಾದರೂ ತೊಂದರೆಯಾಗುತ್ತಿದ್ದರೆ ಕೂಡಲೇ ಯಾವುದಾದರೂ ಒಂದು ರೂಪಧರಿಸಿ, ಲೋಕಕಂಟಕರನ್ನು ನಾಶ ಮಾಡಿ, ಎಲ್ಲರಿಗೂ ಸುಖ, ಶಾಂತಿ, ನೆಮ್ಮದಿಯನ್ನು ನೀಡುತ್ತಾನೆ. ಅಂತಹಾ ದಯಾ ಮಯನಾದ ಭಗವಂತನು ಭೂದೇವಿಯನ್ನು ರಕ್ಷಿಸುವುದಕ್ಕಾಗಿ ವರಾಹ ರೂಪವನ್ನು ಧರಿಸಿದನು.

ವೈಕುಂಠದಲ್ಲಿ ಜಯ, ವಿಜಯ ಎಂಬ ದ್ವಾರಪಾಲಕರಿದ್ದರು. ಅವರಿಬ್ಬರೂ ಮಹಾವಿಷ್ಣುವಿನ ಅಚ್ಚು ಮೆಚ್ಚಿನ ಸೇವಕರು, ಭಕ್ತರು. ಒಂದು ದಿನ ಸನಕ ಸನಂದಾದಿ ಮುನಿಗಳು ಶ್ರೀ ಮಹಾವಿಷ್ಣುವಿನ ದರ್ಶನ ಪಡೆಯುವುದಕ್ಕಾಗಿ ವೈಕುಂಠಕ್ಕೆ ಬಂದರು. ಆಗ ಶ್ರೀ ಮಹಾವಿಷ್ಣುವು ವಿಶ್ರಾಂತಿ ತೆಗೆದು ಕೊಳ್ಳುತ್ತಿದ್ದನು. ಆದ್ದರಿಂದ ಜಯ ವಿಜಯರು ಆ ಮುನಿಗಳನ್ನು ಒಳಗೆ ಬಿಡಲಿಲ್ಲ. ಆದ್ದರಿಂದ ಕೋಪಗೊಂಡ ಮುನಿಗಳು, ಜಯವಿಜಯರನ್ನು ನೋಡಿ.

ಅಹಂಕಾರಿಗಳಾದ ದ್ವಾರಪಾಲಕರೇ! ನೀವು ನಮ್ಮನ್ನು ತಡೆದು, ಭಗವಂತನ ದರ್ಶನಕ್ಕೆ ಅಡ್ಡಿ ಪಡಿಸಿದ್ದೀರಿ. ಜೊತೆಗೆ ನಮ್ಮನ್ನೂ ಅವಮಾನಿಸಿದ್ದೀರಿ.ಅದಕ್ಕೆ ನೀವಿಬ್ಬರೂ ಭೂಲೋಕದಲ್ಲಿ ಜನಿಸಿ ಎಂದು ಶಾಪವನ್ನು ನೀಡಿದರು. ಅವರ ಶಾಪ ದಿಂದ ಭಯಗೊಂಡ ಜಯ, ವಿಜಯರು, ಕೂಡಲೇ ವಿಷ್ಣುವಿನ ಮೊರೆಹೊಕ್ಕರು. ಆಗ ವಿಷ್ಣುವು, ಮುನಿಗಳನ್ನು ಅವಮಾನಗೊಳಿಸಿದ ತಪ್ಪಿಗೆ ಶಿಕ್ಷೆ ತಪ್ಪುವುದಿಲ್ಲ. ನೀವು ಭೂಲೋಕದಲ್ಲಿ ಹುಟ್ಟಲೇ ಬೇಕಾಗುತ್ತದೆ. ಆದರೆ ನೀವು ನನ್ನ ಪರಮ ಭಕ್ತರಾದ್ದರಿಂದ ನಿಮಗೆ ಎರಡು ಅವಕಾಶಗಳನ್ನು ನೀಡುತ್ತೇನೆ. ನೀವೇ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಿ ಅಂದು ಹೇಳಿ,

'ಭೂಲೋಕದಲ್ಲಿ ನೀವು ನನ್ನ ಭಕ್ತರಾಗಿ ಏಳು ಜನ್ಮಗಳನ್ನು ಕಳೆಯುತ್ತೀರೋ ಅಥವಾ ನನ್ನ ಪರಮ ಶತ್ರುಗಳಾಗಿ ಮೂರು ಜನ್ಮ ಕಳೆಯುತ್ತೀರೋ ನೀವೇ ನಿರ್ಧರಿಸಿ ಎಂದು ಹೇಳಿದ.

ಆಗ ಅವರಿಬ್ಬರೂ ದುಃಖಿಸುತ್ತಾ, ದೇವ ದೇವಾ! ನಿನ್ನ ಭಕ್ತರಾಗಿ ಏಳು ಜನ್ಮಗಳ ಕಾಲ ನಿನ್ನನ್ನು ಬಿಟ್ಟು ಇರಲು ಸಾಧ್ಯವಿಲ್ಲ. ನಿನ್ನ ಶತ್ರುಗಳಾದರೂ ಪರವಾಗಿಲ್ಲ. ಮೂರು ಜನ್ಮಗಳನ್ನು ಕಳೆದು ನಿನ್ನನ್ನು ಸೇರುತ್ತೇವೆ ಎಂದು ಹೇಳಿದರು. ಅದಕ್ಕೆ ಸಮ್ಮತಿಸಿದ ವಿಷ್ಣುವು,

ನೀವು ಮೊದಲ ಜನ್ಮದಲ್ಲಿ ಹಿರಿಣ್ಯಾಕ್ಷ ಹಿರಣ್ಯಕಶಿಪುಗಳಾಗಿ, ಎರಡನೆಯ ಜನ್ಮದಲ್ಲಿ ರಾವಣಾ, ಕುಂಭಕರ್ಣರಾಗಿ ಮೂರನೆಯ ಜನ್ಮದಲ್ಲಿ ಶಿಶುಪಾಲ, ದಂತ ವಕ್ರರಾಗಿ ಹುಟ್ಟಿ ನನ್ನಿಂದಲೇ ಹತರಾಗಿ ನನ್ನನ್ನೇ ಸೇರುತ್ತಿರಿ ಎಂದು ಅಭಯವನ್ನು ನೀಡಿದ.

ಅವರಿಬ್ಬರು ಕಶ್ಯಪ, ಅದಿತಿಯರ ಮಕ್ಕಳಾಗಿ ಹುಟ್ಟಿದರು.ಅವರಿಬ್ಬರೂ ಹುಟ್ಟಿದಾಗ ಬೆಂಕಿಯ ಮಳೆ ಸುರಿಯಿತಂತೆ, ಎಲ್ಲೆಲ್ಲೂ ಭೂಕಂಪಗಳು, ಉಲ್ಕಾಪಾತಗಳಾದುವಂತೆ.

ಅವರಿಬ್ಬರು ಭಯಂಕರರಾದ ದಾನವರಾಗಿ, ಲೋಕದ ಜನರನ್ನೆಲ್ಲಾ ಭಯಪಡಿಸುತ್ತಾ ದೇವತೆಗಳನ್ನು, ಸಜ್ಜನರನ್ನು ಹಿಂಸಿಸುತ್ತಾ ಎಲ್ಲರೂ ನಡುಗುವಂತೆ ಮಾಡಿದ್ದರು.

ಒಮ್ಮೆ ಹಿರಣ್ಯಾಕ್ಷನು, ಭೂದೇವಿಯನ್ನೇ ಅಪಹರಿಸಿ, ಸಮುದ್ರದ ಅಳದಲ್ಲಿ ಅಡಗಿಸಿಟ್ಟ, ಭೂದೇವಿಯ ದುಃಖವನ್ನು ಯಾರೂ ಕೇಳುವವರಿಲ್ಲದಂತಾಯಿತು. ಆಗ ಭೂದೇವಿ ಬ್ರಹ್ಮದೇವನನ್ನು ಪ್ರಾರ್ಥಿಸಿದಳು. ಅವಳ ಪ್ರಾರ್ಥನೆಯನ್ನು ಮನ್ನಿಸಿದ ಬ್ರಹ್ಮದೇವನು ದೇವತೆಗಳನ್ನೆಲ್ಲಾ ಜೊತೆಗೆ ಕರೆದುಕೊಂಡು ವೈಕುಂಠಕ್ಕೆ ಬಂದನು. ಅಲ್ಲಿ ಬ್ರಹ್ಮಾದಿ ದೇವತೆಗಳು ಶ್ರೀಮಹಾವಿಷ್ಣುವನ್ನು ವಿಧವಿಧವಾಗಿ ಪ್ರಾರ್ಥಿಸಿದರು. ಅವರ ಪ್ರಾರ್ಥನೆಗೆ ಮೆಚ್ಚಿದ ಭಗವಂತನು ಅವರಿಗೆ ಅಭಯವನ್ನು ನೀಡುತ್ತಾ,

ನೀವೇನೂ ಭಯಪಡಬೇಡಿ. ನಾನು ವರಾಹರೂಪವನ್ನು ಧರಿಸಿ ಹಿರಣ್ಯಾಕ್ಷನನ್ನು ಸಂಹಾರ ಮಾಡುತ್ತೇನೆ. ನಂತರ ನರಸಿಂಹನ ರೂಪವನ್ನು ಧರಿಸಿ ಅವನ ಅಣ್ಣನಾದ ಹಿರಣ್ಯಕಶಿಪುವನ್ನು ಕೊಲ್ಲುತ್ತೇನೆ. ಅಂದು ಅವರನ್ನು ಅನುಗ್ರಹಿಸಿ ಕಳಿಸಿದ.

ನಂತರ ಹಿರಣ್ಯಾಕ್ಷನನ್ನು ಕೊಲ್ಲುವುದಕ್ಕೆ ವರಾಹರೂಪವನ್ನು ಧರಿಸಿದ. ಏಕೆಂದರೇ ಅವನು ಬ್ರಹ್ಮದೇವನಿಂದ ವರವನ್ನು ಪಡೆದಿದ್ದ. ಆ ವರದ ಪ್ರಕಾರ ಅವನನ್ನು, ಅದರಲ್ಲೂ ದೇವತೆಗಲಾಗಲಿ, ದಾನವರಾಗಲಿ, ಮನುಷ್ಯರಾಗಲಿ, ಆಯುಧವಾಗಲೀ, ಭೂಮಿಯ ಮೇಲಾಗಲಿ ಆಕಾಶದಲ್ಲಾಗಲಿ ಕೊಲ್ಲಬಾರದೆಂದು ವರವನ್ನು ಪಡೆದುಕೊಂಡಿದ್ದ, ಅದಕ್ಕೆ ಶ್ರೀ ಮಹಾವಿಷ್ಣುವು ಮುಖವನ್ನು ಮಾತ್ರಾಪ್ರಾಣಿಯಾಗಿ, ಉಳಿದ ದೇಹ ಮನುಷ್ಯಾಕಾರದಲ್ಲಿ, ಜೊತೆಗೆ ಚೂಪಾದ ಕೋರೆಹಲ್ಲುಗಳಿಂದ ಅವತರಿಸಿದ.

ಲೋಕದಲ್ಲೆಲ್ಲಾ ಅಟ್ಟಹಾಸ ಮಾಡುತ್ತಾ ಓಡಾಡುತ್ತಿದ್ದ ಹಿರಣ್ಯಾಕ್ಷನನ್ನು ಅಟ್ಟಿಸಿಕೊಂಡು ಬಂದ. ಅವನನ್ನು ನೋಡಿ ಹಿರಣ್ಯಾಕ್ಷನು ಸ್ವಲ್ಪ ಭಯಗೊಂಡರು ನಂತರ ವರಾಹನನ್ನು ಅನೇಕ ರೀತಿಯಲ್ಲಿ ಜಾರಿದ. ಅವನನ್ನು ಕಪಟಿ, ವಂಚಕ, ಮೋಸಗಾರ, ತನ್ನನ್ನು ಭಯದಿಂದ ಈ ರೀತಿ ವೇಷ ಧರಿಸಿ ಬಂದನೆಂದು ಹಾಸ್ಯ ಮಾಡಿದ. ನಂತರ ಅವರಿಬ್ಬರಿಗೂ ಘೋರವಾದ ಯುದ್ಧ ನಡೆಯಿತು. ಹಿರಣ್ಯಾಕ್ಷ ತನ್ನ ಬಳಿ ಇದ್ದ ಎಲ್ಲಾ ರೀತಿಯ ಆಯುಧಗಳನ್ನು ಬಳಸಿದ. ಆದರೆ ವರಾಹ ಸ್ವಾಮಿಯನ್ನು ಏನೂ ಮಾಡಲು ಸಾಧ್ಯವಾಗಲಿಲ್ಲ. ಕೊನೆಗೆ ವರಾಹದೇವರು ಅವನನ್ನು ತನ್ನ ಚೂಪಾದ ಕೋರೆ ಹಲ್ಲುಗಳಿಂದ ತಿವಿದು ಸಂಹಾರ ಮಾಡಿದ. ನಂತರ ಸಮುದ್ರದ ಆಳದಲ್ಲಿದ್ದ ಭೂದೇವಿಯನ್ನು ತನ್ನ ಕೋರೆಹಲ್ಲುಗಳಿಂದಲೇ ಮೇಲಕ್ಕೆ ತಂದು ಕಕ್ಷೆಯಲ್ಲಿರಿಸಿದ. ಆಗ ದೇವತೆಗಳೆಲ್ಲಾ ವರಾಹಾಸ್ವಾಮಿಯ ಮೇಲೆ ಹೂವಿನ ಮಳೆಯನ್ನು ಸುರಿಸಿದರು.

ಈ ವರಾಹಸ್ವಾಮಿಯಿಂದಲೇ ಯಜ್ಞ ಯಾಗ, ಹೋಮ, ಹವನ, ಪಿತೃಕಾರ್ಯಗಳೆಲ್ಲಾ ಪ್ರಾರಂಭವಾಗಿವೆ. ವರಾಹಸ್ವಾಮಿಯ ಕೂದಲುಗಳನ್ನೇ ನಾವು ಪವಿತ್ರವಾದ ಕೆಲಸಗಳಲ್ಲಿ ಬಳಸುವ ದರ್ಭೆ ಎಂದು ಹೇಳುತ್ತಾರೆ.

ಮಕ್ಕಳೇ! ನೋಡಿದೀರಾ! ಆ ಭಗವಂತನು 'ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಎಂಬ ನೀತಿಯನ್ನು ಅನುಸರಿಸುತ್ತಾನೆ. ಆದ್ದರಿಂದ ನೀವು ಲೋಕಕ್ಕೆ ಉಪಕಾರಿಗಳಾಗಿ ಆ ಭಗವಂತನ ಕೃಪೆಗೆ ಪಾತ್ರರಾಗಿ, ನಿಮ್ಮ ಜೀವನದಲ್ಲಿ ಏಳಿಗೆಯನ್ನು ಕಾಣಿರಿ.



# ತಿರುಮಳಿಶೈ ಯಾಳ್ವಾರ್

ಶ್ರೀಮತಿ.ಸಿ.ಎಸ್. ಊರ್ಮಿಳಾ

ಹಿಂದೊಮ್ಮೆ ಅತ್ರಿಯೇ ಮುಂತಾದ ಮಹರ್ಷಿಗಳು ಬ್ರಹ್ಮನಲ್ಲಿಗೆ ಹೋಗಿ ಭೂಲೋಕದಲ್ಲಿ ನಮಗೆ ತಪಸ್ಸು ಮಾಡಲು ಅತ್ಯುತ್ತಮವಾದ ಕ್ಷೇತ್ರ ಯಾವುದೆಂದು ಕೇಳಿದರು. ಅದಕ್ಕೆ ಬ್ರಹ್ಮನು ಮಹೀಸಾರ ಕ್ಷೇತ್ರವೇ ಅತ್ಯುತ್ತಮವಾದ ಕ್ಷೇತ್ರ ಎಂದು ನಿರೂಪಿಸಿದನು. ಇದು ಚೆನ್ನೈನ ಬಳಿಯಿರುವ ತಿರುಮಳಿಶೈ ಎಂಬ ಊರು.

ಈ ದಿವ್ಯ ಕ್ಷೇತ್ರದಲ್ಲಿ ಭಾರ್ಗವರೆಂಬ ಋಷಿಗಳು ದೀರ್ಘ ಸತ್ರವೆಂಬ ದೊಡ್ಡಯಾಗದಿಂದ ಸರ್ವೇಶ್ವರನನ್ನು ತೃಪ್ತಿಗೊಳಿಸಿದರು. ಅಲ್ಲಿಯೇ ತಪಸ್ಸಿಗೂ ಕುಳಿತರು. ದೇವತೆಗಳು ಅವರ ತಪಸ್ಸನ್ನು ಕೆಡಿಸಲು ಪ್ರಯತ್ನಿಸಿ ವಿಫಲರಾದರು. ಆದರೆ ಕನಕಾಂಗಿ ಎಂಬ ಅಪ್ಸರೆಯು ತನ್ನ ಗಾನ, ನೃತ್ಯಗಳಿಂದ ಭಾರ್ಗವ ಋಷಿಯ ತಪೋಭಂಗ ಮಾಡಿದಳು. ಅದರ ಫಲವಾಗಿ ಆಕೆಯಲ್ಲಿ ಪಿಂಡಾಕೃತಿಯು ಹೊರಬಿದ್ದಿತು. ಅದನ್ನು ಕಂಡು ಜಿಗುಪ್ಸೆಗೊಂಡು ಒಂದು ಬೆತ್ತದ ಪೊದೆಯಲ್ಲಿ ಎಸೆದು ಹೊರಟು ಹೋದಳು. ಆ ಪಿಂಡವು ಗಂಡುಮಗುವಾಗಿ ಪರಿಣಮಿಸಿತು. ಅಳತೊಡಗಿತು. ಅಲ್ಲಿಯೇ ಹತ್ತಿರದ ದೇವಸ್ಥಾನದಲ್ಲಿ ರಾರಾಜಿಸುತ್ತಿದ್ದ ಜಗನ್ನಾಥನು ಲಕ್ಷ್ಮೀದೇವಿಯ ಸಹಿತ ಒಂದು ಶಿಶುವನ್ನು ಕಟಾಕ್ಷಿಸಿ ಹಸಿವುದಾಹವಿಲ್ಲದಂತೆ ಮಾಡಿರಿ ಭಗವಂತನ ದರ್ಶನವಿಲ್ಲದೆ ಹೋಗಲು ಮಗುವು ಅಳಲು ಆರಂಭಿಸಿತು. ಆಗ ಅಲ್ಲಿಗೆ ಬೆತ್ತ ಕುಯ್ಯಲು ಬಂದ ತಿರುವಾಳನೆಂಬ ರೈತನು ಅಲ್ಲಿದ್ದ ಮಗುವನ್ನು ನೋಡಿ, ತನಗೆ ದೈವಿಕವಾಗಿ ಸಿಕ್ಕಿತೆಂದು ಎತ್ತಿಕೊಂಡು ಮನೆಗೆ ಹೋದನು. ಇದುವರೆಗೆ ಆ ರೈತನಿಗೆ ಮಕ್ಕಳಾಗಿರಲಿಲ್ಲ. ಆ ಮಗುವು ಏನನ್ನೂ ಉಣ್ಣದೆ ಸುಮ್ಮನೆ ಅಳುತ್ತಿತ್ತು. ಯಾವುದೇ ಮಲಮೂತ್ರ ವಿಸರ್ಜನೆಯೂ ಇಲ್ಲದೆ ಬೆಳೆಯಿತು. ಹೀಗಿರುವಾಗ ಒಮ್ಮೆ ಒಂದು ಮುಪ್ಪಿನ ದಂಪತಿಗಳು ತಿರುಮಳಿಶೈ ಬಳಿ ಹಾಲಿನೊಂದಿಗೆ ಬಂದು ಅದನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು. ಅವರ ಭಕ್ತಿಗೆ ಮೆಚ್ಚಿ ಅದನ್ನು ಸ್ವೀಕರಿಸಿದರು.

ಹೀಗಾಗಿ ವೃದ್ಧ ದಂಪತಿಗಳು ಅಂದಿನಿಂದ ಪ್ರತಿದಿನ ಹಾಲನ್ನು ತಂದು ಕೊಡುತ್ತಿದ್ದರು. ಒಂದು ದಿನ ತಾವು ಸ್ವೀಕರಿಸಿ ಸ್ವಲ್ಪ ಮಿಗಿಸಿದ ಹಾಲನ್ನು ಹಿಂತಿರುಗಿಸಿಕೊಟ್ಟರು. ಅಷ್ಟೇ ಅಲ್ಲದೆ ಆ ಹಾಲನ್ನು ಕುಡಿಯ ಬೇಕೆಂದು ಸಾಕು ತಾಯಿಗೆ ಹೇಳಿದರು. ಆಳ್ವಾರರ ಮಾತಿನಂತೆ ಆ ಮಿಕ್ಕ ಹಾಲನ್ನು ಅವಳು ಕುಡಿದಳು.ಕೆಲವು ದಿನಗಳ ನಂತರ ಆಳ್ವಾರರ ಸಾಕು ತಾಯಿಗೂ ಒಂದು ಗಂಡು ಮಗುವಾಯಿತು. ಆ ಮಗುವಿಗೆ ಕಣಿ ಕಣ್ಣನ್ ಎಂದು ಹೆಸರಿಟ್ಟರು. ಕಣಿಕಣ್ಣನ್ ತಿರುಮಳಿಶೈ ಆಳ್ವಾರರೊಡನೆ (ಭಕ್ತಿಸಾರ) ತಮ್ಮ ಜೀವಿತವರೆಗೂ ಒಟ್ಟಾಗಿಯೇ ಇದ್ದರು. ಈ ಹಿಂದೆಯೇ ಹೇಳಿದಂತೆ ತಿರುಮಳಿಶೈಯವರು ತನ್ನ ಸುಮಾರು 7 ವರ್ಷ ಕಳೆದರು ಅಷ್ಟೇ ಅಲ್ಲದೆ ಅವರಿಗೆ ಈ ಜೀವಿತದಲ್ಲಿ ಜಿಗುಪ್ಸೆ ಉಂಟಾಯಿತು.ವೈರಾಗ್ಯ ಹೊಂದಿ ಅನೇಕ ವರ್ಷಗಳವರೆಗೆ ಯೋಗಾಭ್ಯಾಸ ಮಾಡಿದರು. ಅನೇಕ ದಿವ್ಯ ಕ್ಷೇತ್ರಗಳಿಗೆ ಹೋಗಿ ಭಗವಂತನ ದರ್ಶನ ಪಡೆದು ತದನಂತರ ಯೋಗ ದಿಂದ ಪರಬ್ರಹ್ಮ ವಸ್ತುವನ್ನು ತಿಳಿಯಲು ಇಷ್ಟಪಟ್ಟರು ಹೊರಟು ಅನೇಕ ಮತಗಳನ್ನು ಅವಲಂಭಿಸಿ ಅವುಗಳಲ್ಲಿ ತಮ್ಮ ಇಷ್ಟಾರ್ಥ. ಪೂರ್ತಿಯಾಗದೆ ಕೊನೆಗೆ ಶೈವರಾಗಿ ಶಿವವಾಕ್ಯ ಎಂಬ ಹೆಸರನ್ನು ಇಟ್ಟುಕೊಂಡು ಪ್ರಸಿದ್ಧಿ ಹೊಂದಿದರು.ಯಾರ ಬಳಿಯು ಮಾತನಾಡದೆ ಯಾವಾಗಲೂ ಏಕಾಂತ ದಲ್ಲಿ ವಾಸಮಾಡುತ್ತಿದ್ದರು. ಭಕ್ತಿಸಾರರೆಂಬ ನಾಮಧೇಯವನ್ನು ಈಶ್ವರ ನಿಂದ ಪಡೆದು ಇವರು ಒಂದು ಗುಹೆಯಲ್ಲಿ ಯೋಗ ಮಾಡುತ್ತಿರುವಾಗ ಇವರ ಸಮಕಾಲೀನರಾಗಿದ್ದ ಪೇಯಾಳ್ವಾರರು ಪರತತ್ತ್ವದ ಪರಬ್ರಹ್ಮದ ನಿಜಸ್ವರೂಪವನ್ನು ಅರಹಲು ಬಂದರು.ಆಚಾರ್ಯರ ಅನುಗ್ರಹದಿಂದ ಭಗವಾನ್ ವಿಷ್ಣುವೇ ಪರಬ್ರಹ್ಮವೆಂದು ಅರಿತರು. ಇವರೂ ಸಹ ಅನೇಕ ಕ್ಷೇತ್ರಗಳನ್ನು ಸಂದರ್ಶಿಸಿದ ಹಾಗೆ ಕುಂಭಕೋಣಕ್ಕೆ ಬಂದರು. ಅಲ್ಲಿ ಆರಾವವಮುದನ್ ದೇವಾಲಯಕ್ಕೆ ಹೋಗಿ ಭಗವಂತ ಆರಾವಮುದ ನನ್ನು “ನಡಂದ ಕಾಲ್ಗಳ್ ಶ್ರೀ’ ಎಂದು ಹಾಡಲು ಪ್ರಾರಂಭಿಸಿದಾಗ ಭಗ ವಂತನೊಡನೆ ಇವರು ಸಂಭಾಷಿಸಿದರೆಂಬ ಪ್ರತೀತಿ ಇದೆ. ಆಗ ಪೇರಿ ಯಾಳ್ವಾರರಂತೆ ಭಕ್ತಿಸಾರರೂ ಸಹ ಸಾಕ್ಷಾತ್ ಭಗವಂತನನ್ನು ನೋಡಿ ಹೆದರಿ ‘ವಾಳಿಕೇಶನೇ ಎಂದು ಮಂಗಳಾಶಾಸನ ಮಾಡಿದರು.ಭಕ್ತಿ ಸಾರರು ಅಲ್ಲಿ ಬಹುಕಾಲ ಯೋಗ ಮಾಡುತ್ತಿದ್ದರು.

ಭಕ್ತಿಸಾರರು ಈ ಭೂಲೋಕದಲ್ಲಿ ನಾಲ್ಕು ಸಾವಿರದ ಏಳು ವರ್ಷ ಗಳಿದ್ದರು. ಅವರು ತಮ್ಮ ಭಗವದನುಭವವನ್ನು ‘ನಾನ್ಮುಹನ್ ತಿರು ವಂದಾದಿ’ (96 ಪಾಶುರುಗಳು) ಮತ್ತು ‘ತಿರುಚ್ಚಂದ ವಿರುತ್ತಂ’ ಎಂಬೆರಡು ಪ್ರಬಂಧಗಳನ್ನು ಹಾಡಿ ನಮಗೆ ಉಪಕರಿಸಿದ್ದಾರೆ.



# ಶ್ರೀ ವಾದಿರಾಜರು

ಶ್ರೀಮತಿ. ಸುಧಾಮಧುಸೂದನ್

ವಿಜಯೀಂದ್ರರು ಮತ್ತು ವಾದಿರಾಜರು-ಇವರಿಬ್ಬರು ವ್ಯಾಸರಾಜರ ಶಿಷ್ಯರಲ್ಲಿ ಅತಿ ಪ್ರಸಿದ್ಧರು.ಶ್ರೀಮದಾಚಾರ್ಯರು ಉಡುಪಿಯಲ್ಲಿ ಶ್ರೀ ಕೃಷ್ಣ ಪ್ರತಿಷ್ಠೆ ಮಾಡಿದ ಮೇಲೆ ಆ ಕೃಷ್ಣನ ಪೂಜೆಗಾಗಿ ಎಂಟು ಜನಕ್ಕೆ ಆಶ್ರಮಕೊಟ್ಟರು. ಹಾಗೆ ಆಶ್ರಮ ಸ್ವೀಕರಿಸಿದವರಲ್ಲಿ ಆಚಾರ್ಯರ ತಮ್ಮಂದಿರಾದ ಶ್ರೀ ವಿಷ್ಣುತೀರ್ಥರೂ ಒಬ್ಬರು. ಶ್ರೀ ವಾದಿರಾಜರು ಇವರ ಪರಂಪರೆಯಲ್ಲಿ ಬಂದವರು. ಇವರ ಗುರುಗಳ ಹೆಸರು ಶ್ರೀ ವಾಗೀಶ ತೀರ್ಥರು. ದಕ್ಷಿಣ ಕನ್ನಡ ಜಿಲ್ಲೆಯ ಕುಂಭಕಾಶಿಯ ಹತ್ತಿರ ಹೂವಿನ ಕೆರೆ ಎಂಬ ಗ್ರಾಮದಲ್ಲಿ ವಾದಿರಾಜರು ಜನಿಸಿದರು. ಇವರು ಚಿಕ್ಕವರಿರುವಾಗಲೇ ಹೆಚ್ಚು ಮೇಧಾವಿಗಳಾಗಿದ್ದರು. ವಾಗೀಶ ತೀರ್ಥರಿಂದ ಆಶ್ರಮ ಪಡೆದ ಮೇಲೆ ಇವರು ವ್ಯಾಸರಾಯರ ಅಮಲ ಕೀರ್ತಿಯನ್ನು ಕೇಳಿ ಅವರಲ್ಲಿ ಹೋಗಿ ವಿಜಯೀಂದ್ರರೊಡಗೂಡಿ ಸಕಲ ಉದ್ಗ್ರಂಥಗಳನ್ನು ಚತುಷಷ್ಠಿ ಕಲೆಗಳನ್ನು ಅಭ್ಯಾಸ ಮಾಡಿದರು. ಇವರ ವಾಕ್ಚಾತುರ್ಯ ಪಾಂಡಿತ್ಯ; ಪ್ರತಿಭೆಯನ್ನು ನೋಡಿ ಕೃಷ್ಣದೇವರಾಯ ಇವರನ್ನು 'ಪ್ರಸಂಗಾ ಭರಣತೀರ್ಥ'ರೆಂದು ಕರೆದ. ವಿದ್ಯಾಭ್ಯಾಸ ಮುಗಿದ ಮೇಲೆ ಇವರು ವ್ಯಾಸರಾಜರಿಂದ ವ್ಯಾಸ ಮುಷ್ಟಿಕೆಗಳನ್ನು ಪಡೆದು ತಮ್ಮ ಸ್ಥಳವಾದ ಉಡುಪಿಗೆ ತೆರಳಿದರು.


ಉಡುಪಿಗೆ ಹೋದ ಮೇಲೆ ಇವರು ಉಡುಪಿಯ ಅಷ್ಟಮಠಗಳಲ್ಲಿ ಪರ್ಯಾಯ ಪೂಜಾ ಪದ್ಧತಿಯನ್ನೇರ್ಪಡಿಸಿ, ವಿಶೇಷ ಉತ್ಸವಾದಿಗಳ ವ್ಯವಸ್ಥೆ ಮಾಡಿದರು. ಕ್ರಿ.ಶ. 1532 - 33 ರ ಸುಮಾರಿನಲ್ಲಿ ತಮ್ಮ ಪರ್ಯಾಯ ಕಾಲದಲ್ಲಿ ಇವರು ಗುರುಗಳಾದ ವ್ಯಾಸರಾಯರನ್ನೂ ವಿಜಯನಗರದ ಅರಸನಾದ ಅಚ್ಯುತದೇವರಾಯನನ್ನು ಉಡುಪಿಗೆ ಕರೆಸಿ ವಿಶೇಷ ಸನ್ಮಾನ ಮಾಡಿದರು. ಇವರ ಕಾಲದಲ್ಲಿ ಕೃಷ್ಣ ಚೈತನ್ಯರು ದಕ್ಷಿಣ ದೇಶದ ಸಂಚಾರ ಮಾಡುತ್ತಾ ಉಡುಪಿಗೆ ಬಂದು ಅಲ್ಲಿ ಬಹು ಕಾಲವಿದ್ದು. ಮಧ್ವಸಿದ್ಧಾಂತ ರಹಸ್ಯಗಳನ್ನು ವಿಚಾರಮಾಡಿ ತಿಳಿದು ಕೊಂಡರು." ವಾದಿರಾಜರು ಸ್ವರ್ಣಕಾರರೇ ಮೊದಲಾದ ಕಡಿಮೆ ಜಾತಿ ಯವರಲ್ಲಿ ಅನುಗ್ರಹಮಾಡಿ, ಅವರಿಗೆ ಸಾಧನೆಗನುಕೂಲವಾಗುವಂತಹ ಅನೇಕ ಸೌಲಭ್ಯಗಳನ್ನೇರ್ಪಡಿಸಿದರು. ಇವರು ಭಾರತದಾದ್ಯಂತ ಸಂಚಾರ ಮಾಡಿ ತಿರುವಾಂಕೂರು, ಕೊಚ್ಚಿಗಳಲ್ಲಿ ಉತ್ತರ ಭಾರತದಲ್ಲೂ ವೈಷ್ಣವರ ವರ್ಚಸ್ಸನ್ನು ಹೆಚ್ಚಿಸಿದರು. ಬದರಿಗೆ ಹೋಗಿ ತಮ್ಮ ಯೋಗ ಸಾಮರ್ಥ್ಯದಿಂದ ವೇದವ್ಯಾಸರು, ನರನಾರಾಯಣರು ಮತ್ತು ಆಚಾರ್ಯರ ದರ್ಶನ ಮಾಡಿಕೊಂಡು .'ನಾರಾಯಣ ಭೂತ' ನೆಂಬ ಬ್ರಹ್ಮ ರಾಕ್ಷಸನನ್ನು ವಶಪಡಿಸಿಕೊಂಡು ಬಂದರು. ಉತ್ತರ ಕನ್ನಡ ಜಿಲ್ಲೆ ಯಲ್ಲಿನ ಸೋದೆಯೆಂಬ ಪಾಳೆಯಪಟ್ಟಿನ ಅಧಿಪತಿ ಅರಸಪ್ಪ ನಾಯಕ ನಿಗೆ ಶತ್ರುಭಯವನ್ನು ತಪ್ಪಿಸಿ, ಶೈವವಾದಿಯನ್ನು ನಿಗ್ರಹಿಸಿ ಸೋದೆ ಯಲ್ಲಿಯೇ ನೆಲೆಸಿದರು. ಮತ್ತೊಮ್ಮೆ ಸಂಚಾರ ಮಾಡುವಾಗ ಬೇಲೂರಿ ನಲ್ಲಿ ಬಹಳಕಾಲವಿದ್ದು ಚೆನ್ನಕೇಶವ ದೇವರನ್ನು ನಾನಾ ರೀತಿ ಸ್ತೋತ್ರ ಮಾಡಿರುವರು. ಅಲ್ಲಿ ವೈಕುಂಠದಾಸರು ಇವರೊಡನಿದ್ದು ಹರಿಭಜನೆ ಮಾಡುತ್ತಿದ್ದರು. ಅರಸಪ್ಪ ನಾಯಕನ ಸಹಾಯದಿಂದ ಸೋದೆಯಲ್ಲಿ ತ್ರಿವಿಕ್ರಮದೇವರನ್ನು ಪ್ರತಿಷ್ಠಾಪಿಸಿ ಫಾಲ್ಗುಣಮಾಸದಲ್ಲಿ ಆ ದೇವರಿಗೆ ರಥೋತ್ಸವಾದಿಗಳ ವ್ಯವಸ್ಥೆಮಾಡಿ ತಾವು ಸಶರೀರರಾಗಿಯೇ ಬೃಂದಾವನ ಪ್ರವೇಶಮಾಡಿದರು. ಕ್ರಿಶ.1480 ರ ಸುಮಾರಿನಲ್ಲಿ ಉದ ಯಿಸಿದ ವಾದಿರಾಜರು 120 ವರ್ಷಗಳಷ್ಟು ಕಾಲ ದೇಹದಿಂದಿದ್ದು ಕ್ರಿ.ಶ. 1600 ರಲ್ಲಿ ಸಶರೀರರಾಗಿ ಬೃಂದಾವನ ಪ್ರವೇಶ ಮಾಡಿದರು.


ಚಿತ್ರಕಥೆ


# ಸ್ವಾಮಿ ಪುಷ್ಕರಿಣಿ ಮಹಿಮೆ


ಕಥೆ:ತೆಲುಗು ಮೂಲ: ಡಿ.ಶ್ರೀನಿವಾಸ ದೀಕ್ಷಿತರು
ಅನುವಾದ: ಶ್ರೀಮತಿ.ಆರ್.ಕೃಷ್ಣವೇಣಿ
ಚಿತ್ರಗಳು: ಕೆ.ದ್ವಾರಕನಾಥ್

ಚಂದ್ರವಂಶಕ್ಕೆ ಸೇರಿದ ರಾಜ ನಂದನು. ಆತನಿಗೆ ವೃದ್ಧಾಪ್ಯವಾದಾಗ ತನ್ನ ಕುಮಾರನಾದ ಧರ್ಮಗುಪ್ತನಿಗೆ ರಾಜ್ಯವನ್ನು ಒಪ್ಪಿಸಿ ತಾನು ತಪಸ್ಸು ಮಾಡಿಕೊಳ್ಳಲು ರೇವಾ ನದಿ ತೀರಕ್ಕೆ ಹೊರಟನು. ಒಂದು ದಿನ ಬೇಟೆಗಾಗಿ ಕಾಡಿಗೆ ಹೋದ ಧರ್ಮಗುಪ್ತನು ಸಿಂಹದ ದಾಳಿಯಿಂದ ತಪ್ಪಿಸಿಕೊಳ್ಳಲು ಒಂದು ಮರದ ಮೇಲೇರಿದನು. ಅಲ್ಲಿದ್ದ ಒಂದು ಕರಡಿಯು ಮಾನವ ಭಾಷೆಯಲ್ಲಿ....








ಒಪ್ಪಂದದ ಪ್ರಕಾರ ರಾಜನು ಮೊದಲು ನಿದ್ದೆ ಮಾಡಿದನು. ಕರಡಿಯು ಆತನನ್ನು ಕಣ್ಣಿನ ರೆಪ್ಪೆಯಂತೆ ಕಾಪಾಡುತ್ತಿತ್ತು. ಆಗ ಮರದ ಕೆಳಗೆ ನಿಂತಿದ್ದ ಸಿಂಹವು ಭಲ್ಲೂಕದೊಂದಿಗೆ....
ಭಲ್ಲೂಕ ! ನನಗೆ ಹಸಿವಾಗುತ್ತಿದೆ. ನಿದ್ರಿಸುತ್ತಿರುವ ರಾಜನನ್ನು ಕೆಳಗೆ ತಳ್ಳಿಬಿಡು ನಾನು ತಿಂದು ಬಿಡುತ್ತೇನೆ.
ಮೃಗರಾಜಾ! ನನ್ನನ್ನು ಪೂರ್ತಿಯಾಗಿ ನಂಬಿದ ರಾಜನಿಗೆ ನಾನು ದ್ರೋಹವನ್ನು ಮಾಡುವುದು ನ್ಯಾಯವಲ್ಲ. ಆದ್ದರಿಂದ ಆ ಕೆಲಸವನ್ನು ನಾನು ಮಾಡಲಾರೆ, ಇಲ್ಲಿಂದ ನೀನು ಹೊರಟು ಹೋಗು!
ನಂತರ ರಾಜನು ಎಚ್ಚರಗೊಂಡನು ಕರಡಿಯು ನಿದ್ರಿಸುತ್ತಿತ್ತು... ರಾಜನ ಮೇಲಿದ್ದ ನಂಬಿಕೆಯಿಂದ ಆಗ ಮರದ ಕೆಳಗಿದ್ದ ಸಿಂಹವು ...
ರಾಜಾ! ಕರಡಿಯನ್ನು ಕೆಳಗೆ ತಳ್ಳಿಬಿಡು ಅದು ನನ್ನ ಆಹಾರ!
ಹಾಗೆಯೇ ಆಗಲಿ ಮೃಗರಾಜಾ! ಕರಡಿಯನ್ನು ಕೆಳಗೆ ತಳ್ಳಿಬಿಡುತ್ತೇನೆ!
ಸ್ವಲ್ಪವು ಆಲೋಚಿಸದೆ ನಿದ್ರಿಸುತ್ತಿರುವ ಕರಡಿಯನ್ನು ಕೆಳಗೆ ತಳ್ಳಲು ಪ್ರಯತ್ನಿಸಿದನು ರಾಜನು. ಎಚ್ಚರಗೊಂಡ ಕರಡಿಯು ಕೆಳಗೆ ಬೀಳದಂತೆ ತನ್ನ ಜಾಣತನದಿಂದ ತನ್ನನ್ನು ತಾನು ಕಾಪಾಡಿಕೊಂಡಿತು. ತಕ್ಷಣವೇ ಕರಡಿಯು ರಾಜನ ಸಮೀಪಕ್ಕೆ ಬಂದು ಕೋಪದಿಂದ.....
ಛೀ.... ಕೃತಘ್ನನೇ! ನಿನ್ನನ್ನು ಕಾಪಾಡಿದ ನನಗೆ ನೀನು ದ್ರೋಹಮಾಡಿದೆ. ಈ ಪಾಪಕ್ಕಾಗಿ ನೀನು ಮತಿ ಭ್ರಮಣೆಯಿಂದ ತಿರುಗುವಂತಾಗಲಿ
ಅಯ್ಯೋ! ತಪ್ಪು ಮಾಡಿದೆ ಭಲ್ಲೂಕ !



ಧರ್ಮಗುಪ್ತನು ಹುಚ್ಚನಾಗಿ ದೇಶಗಳನ್ನು ಸುತ್ತುತ್ತಿದ್ದನು. ಆತನಿಗಾಗಿ ಮಂತ್ರಿಗಳು ಹುಡುಕಿ ಹುಡುಕಿ ಕಂಡು ಹಿಡಿದರು. ತಕ್ಷಣವೇ ಆತನ ತಂದೆ ನಂದನು ಬಳಿ ಕರೆದು ಕೊಂಡು ಹೋದರು.
ನನ್ನ ಮಗನಿಗೆ ಏಕೆ ಹೀಗೆ ಹುಚ್ಚನಾದನು?
ಪ್ರಭು! ನಮಗೂ ಆ ವಿಷಯವೇ ಅರ್ಥವಾಗುತ್ತಿಲ್ಲ!
ಹಾಗಾದರೆ... ಈ ಹುಚ್ಚು ಹೇಗೆ ಕಡಿಮೆ ಯಾಗುತ್ತದೆ? ಏನಾದರೂ ಆಲೋಚನೆ ಮಾಡಿದ್ದೀರಾ?
ಪ್ರಭು! ಜೈಮಿನಿ ಮಹರ್ಷಿ ಮಾತ್ರವೇ ಈ ಅಪಾಯದಿಂದ ಕಾಪಾಡುತ್ತಾರೆಂಬ ನಮ್ಮ ನಂಬಿಕೆ!
ತಕ್ಷಣವೇ ಎಲ್ಲರೂ ಸೇರಿ ಜೈಮಿನಿ ಮಹರ್ಷಿ ಆಶ್ರಮಕ್ಕೆ ಹೊರಟರು. ನಂದನು ಮಹರ್ಷಿಗೆ ನಮಸ್ಕರಿಸಿ....
ಮಹರ್ಷಿ! ನನ್ನ ಪುತ್ರನಿಗೆ ಹುಚ್ಚು ಹಿಡಿದಿದೆ ಏನಾದರೂ ಉಪಾಯ ಹೇಳಿ!
ರಾಜಾ! ನಿನ್ನ ಕುಮಾರನು ಕರಡಿಗೆ ನಂಬಿಕೆ ದ್ರೋಹವನ್ನು ಮಾಡಿದನು. ಅದರ ಶಾಪದಿಂದಲೇ ಹೀಗೆ ಹುಚ್ಚನಾಗಿದ್ದಾನೆ.


ಮಹರ್ಷಿ ! ನನ್ನ ಕುಮಾರನು ಧರ್ಮವನ್ನು ಮರೆತನು..
ಹೌದು !
ರಾಜಾ! ನಿನ್ನ ಕುಮಾರನನ್ನು ವೆಂಕಟಾಚಲಕ್ಕೆ ಕರೆದುಕೊಂಡು ಹೋಗು. ಅಲ್ಲಿ ಸ್ವಾಮಿ ಪುಷ್ಕರಿಣಿ ಯಲ್ಲಿ ಸ್ನಾನವನ್ನು ಮಾಡಿಸು ತಕ್ಷಣವೇ ಹುಚ್ಚು ಕಡಿಮೆಯಾಗುತ್ತದೆ.
ದಯೆಯಿಂದ ಈ ಹುಚ್ಚು ಕಡಿಮೆಯಾಗುವ ಮಾರ್ಗವನ್ನು ತಿಳಿಸಿ ಮಹರ್ಷಿ!
ಧರ್ಮಗುಪ್ತನು ವೆಂಕಟಾಚಲಕ್ಕೆ ಕರೆದುಕೊಂಡು ಹೋಗಿ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿಸಿದನು ನಂದನು. ತಕ್ಷಣವೇ ಧರ್ಮಗುಪ್ತನು ಮೊದಲಿನಂತೆ ಆದನು.
ತಂದೆ ! ನನ್ನನ್ನು ಕಾಪಾಡಿದ ಕರಡಿಗೆ ನಾನು ದ್ರೋಹವ ಮಾಡಿದೆ. ಅದಕ್ಕೆ ತಕ್ಕ ಫಲವನ್ನು ಅನುಭವಿಸಿದ್ದೇನೆ ! ಕೊನೆಗೆ ಶುಭವು ಫಲಿಸಿದೆ.
ಕುಮಾರ! ಎಲ್ಲಾ ಶ್ರೀ ವೆಂಕಟೇಶ್ವರನ ಕರುಣೆ.... ಸ್ವಾಮಿ ಪುಷ್ಕರಣಿ ಮಹಿಮೆ !....
ಮುಂದಿನ ಸಂಚಿಕೆಯಲ್ಲಿ... ಇನ್ನೊಂದು ಲೀಲೆಯನ್ನು ಹಾಕಲಾಗುವುದು
ಸ್ವಸ್ತಿ

# ಕದಲಿ, ಕಲ್ಪವೃಕ್ಷ ಮತ್ತು ಕಾಮಧೇನು

- ಬಿ. ಆರ್. ಶ್ರೀಕಂಠಯ್ಯ

ಭಗವಂತನ ಸೃಷ್ಟಿ ಅಮೋಘವಾದದು. ಈ ಸೃಷ್ಟಿಯನ್ನು ಯಾವ ವಿಜ್ಞಾನದಿಂದ ಅಥವಾ ಮಾನವನಿಂದಲೂ ಮಾಡಲು ಸಾಧ್ಯವಿಲ್ಲ. ಬೀಜದಿಂದ ಮೊಳಕೆ, ಗರ್ಭದಲ್ಲಿ ಜೀವಿಯ ಬೆಳವಣಿಗೆ ಮತ್ತು ಜನನ. ಅನೇಕ ವಿಧವಾದ ಮರಗಳು ಅದರಲ್ಲಿ ವಿವಿಧವಾದ ಬಿಡುವ ಹಣ್ಣುಗಳೂ, ಹೂವುಗಳು ಮತ್ತು ಅದರ ಸುವಾಸನೆ, ಸೂರ್ಯ ಚಂದ್ರರ ಕರಾರಿಲ್ಲದೆ ಸಮಯದಂತೆ ಉದಯಾಸ್ತ, ಆಯಾಯ ಕಾಲದಲ್ಲಿ ಪ್ರಕೃತಿಯಲ್ಲಿ ಬದಲಾವಣೆ (ಋತುಗಳು). ಋತುವಿಗೆ ಅನುಗುಣವಾಗಿ, ಮಳೆ, ಬಿಸಿಲು, ಚಳಿ, ಮತ್ತು ಮರಗಿಡಗಳಲ್ಲಿ ಎಲೆಗಳ ಉದುರುವಿಕೆ, ಚಿಗುರುವಿಕೆ, ಮೊಗ್ಗು, ಬಿಟ್ಟು, ಹೂವಾಗಿ ಹಣ್ಣುಗಳನ್ನು ಕೊಟ್ಟು, ಎಲ್ಲಾ ಜೀವಿಗಳನ್ನೂ ಸಲಹುತ್ತಿರುವ ಸಸ್ಯಸಂಪತ್ತಿಗೆ ನಾವು ಎಷ್ಟು ವಿಧೇಯರಾದರೂ, ಋಣಮುಕ್ತರಾಗಲು ಸಾಧ್ಯವೇ ಇಲ್ಲ. ಇನ್ನು ಭೂಮಾತೆಯ ವಿಷಯವೂ ಅಷ್ಟೆ. ನಮ್ಮ ಹೊಲಸುಗಳನ್ನು ಸಹಿಸಿ ನಮ್ಮನ್ನು ಸಹನೆಯಿಂದ ಸಲಹುತ್ತಿರುವ ಮಾತೆ. ನಮ್ಮ ಹಿರಿಯರು ಸ್ತ್ರೀಯ ಸಹನೆಯನ್ನು ಈ ಭೂಮಾತೆಯ ಸಹನೆಗೆ ಹೋಲಿಸಿದ್ದಾರೆ. (ಕ್ಷಮಯಾಧರಿತ್ರೀ). ಇದರ ಜೊತೆಗೆ ಕಾಮಧೇನು (ಗೋವು).ಈ ಮಾತೆಯರು, ಜನ್ಮ ಕೊಟ್ಟ ಮಾತೆಯಂತೆ ಸದಾ ಪೂಜನೀಯರು, ಪರಮಾತ್ಮ ಅಥವಾ ಪ್ರಕೃತಿ ಪುಕ್ಕಟೆಯಾಗಿ ಕೊಟ್ಟಿರುವ ಈ ಸಂಪತ್ತಿಗೆ ಪ್ರತಿಫಲವಾಗಿ ನಾವು ಏನು ಕೊಡಲು ಸಾಧ್ಯ. ಅದೇ ಪ್ರಕೃತಿ ಅಥವಾ ಪರಿಸರ ಸಂರಕ್ಷಣೆ. ಈ ಹಿನ್ನೆಲೆಯಲ್ಲಿ, ನಾವು ದಿನನಿತ್ಯ ಉಪಯೋಗಿಸುವ, ಪ್ರಕೃತಿಯ ಅನೇಕ ಕೊಡುಗೆಗಳಲ್ಲಿ ಕೆಲವಾದ,''ಕದಲಿ'' (ಬಾಳೆ), ''ಕಲ್ಪವೃಕ್ಷ'' (ತೆಂಗು) ಮತ್ತು ''ಕಾಮಧೇನು'' ವಿನ (ಗೋವು) ಉತ್ಪನ್ನಗಳ ಉಪಯೋಗದ ಕಡೆಗೆ ಒಂದು ಸಾರಿ ಗಮನ ಹರಿಸೋಣ.

## ಕದಲಿ ಅಥವಾ ಬಾಳೆ:-

ಇದರ ವೈಷಿಸ್ಟ್ಯ,ಇದು ಬೇರೆ ಗಿಡಗಳಂತೆ, ತಿಂದು ಬಿಸಾಕಿದ ಅಥವಾ ಶೇಖರಿಸಿದ ಬೀಜಗಳಿಂದ ಬೆಳೆದ ಹಣ್ಣು ಅಲ್ಲ. ಇದು ಗೆಡ್ಡೆಯಿಂದ ಬೆಳೆಯುವ ಸಸ್ಯ. ಅದರಿಂದ ಇದಕ್ಕೆ ಬಹಳ ಪ್ರಾಮುಖ್ಯತೆ .ಇದು ಎಲ್ಲರಿಗೂ ಎಲ್ಲಾಕಾಲದಲ್ಲೂ, ಇದರ ಎಲೆ, ಹೂವು, ಹಣ್ಣು , ಮತ್ತು ಕಾಂಡ (ದಿಂಡು) ಮಾನವನ ಹುಟ್ಟಿನಿಂದ ಹಿಡಿದು ಅಂತ್ಯ ಕಾಲದವರೆಗೂ ವಿವಿಧ ರೀತಿಯಲ್ಲಿ ಉಪಯೋಗಿಸಲ್ಪಡುವಂತಹ ಅಮೂಲ್ಯವಾದ ಕೊಡುಗೆ. ದೇವಕಾರ್ಯದಲ್ಲಿ ಎಲೆ, ಹಣ್ಣು ಉಪಯೋಗವಾದರೆ, ಬಾಳೆ ಎಲೆಯಲ್ಲಿ

ಊಟವೇ ಒಂದು ಆನಂದ, ಅನುಭವವೇ ಬೇರೆ ಮತ್ತು ವೈಜ್ಞಾನಿಕವಾಗಿಯು ಇದರ ಹಸಿರು ದೇಹಕ್ಕೆ ಬಹಳ ಒಳ್ಳೆಯದು. ಇದರ ದಿಂಡಿನ ಉಪಯೋಗದಿಂದ ಹೊಟ್ಟೆಯಲ್ಲಿ ಇರುವ ''ಕಲ್ಲು'' (ಸ್ಟೋನ್), ಕರಗಿಸುತ್ತದೆ ಮತ್ತು ಜೀರ್ಣಕಾರಿ .

## ಕಲ್ಪವೃಕ್ಷ-

ಇದು ಬಾಳೆಯ ಗಿಡದಂತೆಯೇ ಬೀಜದಿಂದ ಬೆಳೆಯುವ ಮರವಲ್ಲ. ತನ್ನಿಂದ ಉದುರಿದ ಕೆಲವು ಕಾಯಿಯ ಮೂಲಕ ಬೆಳೆಯುವ ಸಸ್ಯ. ಕಲ್ಪವೃಕ್ಷದ ಎಲ್ಲ ಉತ್ಪನ್ನಗಳು ಬಹಳವಾಗಿ ಉಪಯೋಗವಾಗುತ್ತದೆ. ಹೊಂಬಾಳೆ, ಎಳೆನೀರು, ತೆಂಗಿನಕಾಯಿ, ಒಣಗಿದ ಕೊಬ್ಬರಿಯು ಎಲ್ಲರಿಗೂ ಎಲ್ಲಾ ಕಾಲಕ್ಕೂ ಉಪಯುಕ್ತವಾದುದು. ತೆಂಗಿನಗರಿಯ ಉಪಯೋಗವು ಎಲ್ಲರಿಗೂ ತಿಳಿದ ವಿಷಯ. ಒಣಗಿದ ತೆಂಗಿನಗರಿಯ ಕಡ್ಡಿಗಳಿಂದ ಮಾಡಿದ ಪೊರಕೆ ಬಹಳ ಉಪಯೋಗಕರವಾಗಿದೆ. ತೆಂಗಿನ ಚಿಪ್ಪು,ಎಳೆನೀರು ಮತ್ತು ಸುಲಿದ ಮೊಟ್ಟೆಯ ಉಪಯೋಗ ಬಹಳವಾಗಿದೆ. ತೆಂಗಿನ ನಾರಿನ ಉಪಯೋಗ, ತೆಂಗಿನ ಚಿಪ್ಪಿನಿಂದ ತಯಾರಿಸಿದ ಅಲಂಕಾರಿಕ ವಸ್ತುಗಳನ್ನು ಮತ್ತು ಗಿಟಕಿನಿಂದ ಕೆತ್ತನೆ ಕೆಲಸಮಾಡಿ ಮದುವೆ ಮತ್ತು ಇತರೆ ಸಂದರ್ಭಗಳಲ್ಲಿ ಉಡುಗೊರೆಯಾಗಿ ಕೊಡುವುದನ್ನು ನಾವು ಕಾಣಬಹುದು. ಒಂದೇ, ಎರಡೇ, ಬೇಕಾದಷ್ಟು ಇದೆ.

## ಕಾಮಧೇನು - ಗೋವು

ಈ ಗೋಮಾತೆ, ಅನಾದಿಯಿಂದಲೂ ಪೂಜಿಸಲ್ಪಡುವವಳು, ನಮ್ಮ ಋಷಿಗಳು, ಹಿರಿಯರು, ಗೋವಿನಲ್ಲಿ ಕೋಟ್ಯಾನುಕೋಟಿ ದೇವತೆಗಳನ್ನು ಕಂಡವರು. ಗೋವಿನ ಉತ್ಪನ್ನಗಳು, ಎಲ್ಲವೂ ಉಪಯುಕ್ತವೇ, ಹಾಲು, ಹಾಲಿನ ಉಪ - ಉತ್ಪನ್ನಗಳಾದ, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ, ಇತ್ಯಾದಿ, ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಬೇಕೇ ಬೇಕು. ''ಸಾಲಮಾಡಿಯಾದರೂ ತುಪ್ಪ ತಿನ್ನು'' ಎಂಬ ನಾನ್ನುಡಿ ಎಲ್ಲರಿಗೂ ಚಿರಪರಿಚಿತ. ಗೋಮೂತ್ರ ಅಥವಾ ಗಂಜಲ, ಸೆಗಣಿ, ಅನೇಕ ಔಷಧದ ಗುಣಗಳನ್ನು ಹೊಂದಿರುತ್ತದೆ. ಪಂಚಗವ್ಯ - (ಗೋವಿನ ಐದುವಸ್ತುಗಳ ಮಿಶ್ರಣ-ಹಾಲು, ಮೊಸರು,ತುಪ್ಪ, ಗಂಜಲ ಮತ್ತು ಸೆಗಣಿ) ಎಂದು ಈಗಲೂ ಉಪಯೋಗದಲ್ಲಿದೆ. ಗೃಹಪ್ರವೇಶ ಕಾಲದಲ್ಲಿ ಗೋವಿಗೆ ಪೂಜೆ ಮಾಡುತ್ತಾರೆ. ಸತ್ಯವಾಗಿ ನಡೆದ ಪುಣ್ಯಕೋಟಿ ಗೋವಿನ ಕಥೆಯನ್ನು ಎಲ್ಲರೂ ಕೇಳಿದ್ದಾರೆ.ಮಾನವನ ಬಗ್ಗೆ ಹೇಳಿರುವುದನ್ನು - ನೀನಾರಿಗಾದಯೋ ಎಲೆ ಮಾನವ ಎಂಬುದು ಸಾಮಾನ್ಯವಾಗಿ ಎಲ್ಲರ ಮನಸ್ಸಿನಲ್ಲಿರುವ ನಾನ್ನುಡಿ. ಮಕ್ಕಳೇ ನಾವೆಲ್ಲರೂ ಒಟ್ಟಾಗಿ ಭಗವಂತನ ಸೃಷ್ಟಿಯಲ್ಲಿರುವ ಎಲ್ಲವನ್ನು ರಕ್ಷಣೆ ಮಾಡುವ ಪ್ರಯತ್ನ ಮಾಡೋಣ.



# ಪ್ರಜ್ಞಾವಂತ ಬಾಲಕ

**ಹೆಸರು :** ಯು. ಭರತ್ ಶರ್ಮ

**ತರಗತಿ : -** 9 ನೇ ತರಗತಿ

**ಹುಟ್ಟಿದ ದಿನಾಂಕ :** 17.05.2006

**ತಂದೆಯ ಹೆಸರು :** ಯು. ರಾಜೀವಲೋಚನ ಶರ್ಮ

**ತಾಯಿಯ ಹೆಸರು :** ಶ್ರೀಮತಿ. ಶೈಲಜ

**ಪಾಠಶಾಲೆ :** ಭಾರತೀಯ ವಿದ್ಯಾಭವನ್ಸ್ ಶ್ರೀ ವೆಂಕಟೇಶ್ವರ ವಿದ್ಯಾಲಯ,ತಿರುಪತಿ ಕೇಂದ್ರ.

**ವಿಶೇಷ ಪ್ರತಿಭೆ :** ವಿವಿಧ ರಂಗಗಳಲ್ಲಿ - ಮೃದಂಗ ವಿನ್ಯಾಸ, ಗಾತ್ರ ಸಂಗೀತ, ತೆಲುಗು ಸಾಹಿತ್ಯ, ಶತಕರಚನೆ, ಶ್ಲೋಕಪಠನೆ, ಏಕಪಾತ್ರಾಭಿನಯ, ಚಿತ್ರಲೇಖನ, ಚದರಂಗ, ಅಬಾಕಸ್, ವಿದ್ಯಾರಂಗ, ನಾಯಕತ್ವ ಲಕ್ಷಣಗಳಲ್ಲಿ ಪ್ರತಿಭೆ.

**ಲಕ್ಷ್ಯ :** ತೆಲುಗು ಸಾಹಿತ್ಯ ಪರಿಶೋಧನೆ ತೆಲುಗು ಭಾಷೆಯ ಅಭಿವೃದ್ಧಿಗೊಳಿಸುವುದು ಸಾಧಿಸಿದ ವಿಜಯಗಳು.

**2009-** ಎಲ್.ಕೆ.ಜಿ.ಯಿಂದ ಭಗವದ್ಗೀತೆಯಲ್ಲಿ ಬಹುಮಾನಗಳು.

**2011-** ಒಂದನೇ ತರಗತಿಯಲ್ಲಿ ಮಾರ್ಗ್‌ಚಿನ್ಮಯ ವಿದ್ಯಾಲಯದವರು ನಿರ್ವಹಿಸಿದ ಗೋವಿಂದ ನಾಮಗಳ ಸ್ಪರ್ಧೆಯಲ್ಲಿ ಮೊದಲನೆ ಬಹುಮಾನ.

**2013-** ಭಾರತೀಯ ವಿದ್ಯಾಭವನ್‌ನವರು ನಿರ್ವಹಿಸಿದ ಪುಸ್ತಕ ಪ್ರದರ್ಶನೆಯಲ್ಲಿ ಎರಡನೆಯ ತರಗತಿಯಲ್ಲಿಯೇ ಒಮ್ಮೆರ ಪೋತನನಾಗಿ ಏಕಪಾತ್ರಾಭಿನಯ ಮಾಡಿ ಬಹುಮಾನ ಪಡೆದನು.

**2014-** ಚಿನ್ಮಯ ಮಿಷನ್‌ಯವರು ನಿರ್ವಹಿಸಿದ ಭಗವದ್ಗೀತೆ ಸ್ಪರ್ಧೆಯಲ್ಲಿ ಮೂರನೇಯ ಬಹುಮಾನ ಪಡೆದನು.ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದವರು ನಿರ್ವಹಿಸಿದ ಭಗವದ್ಗೀತೆ ಸ್ಪರ್ಧೆಯಲ್ಲಿ ಮೊದಲನೆ ಬಹುಮಾನ ಪಡೆದನು.

**2015-** ಎಸ್.ಐ.ಪಿ. ಅಬಾಕಸ್ ನವರು ವಿಜಯವಾಡದಲ್ಲಿ ನಿರ್ವಹಿಸಿದ "ಎಸ್. ಐ.ಪಿ. ರಿಜಿನಲ್ ಪ್ರಾಡಿಜ್" ಸ್ಪರ್ಧೆಯಲ್ಲಿ ಬಹುಮಾನ ಪಡೆದನು.

**2017-** ಸತ್ಯಸಾಯಿ ಬಾಲವಿಕಾಸ್ ನವರು ನಿರ್ವಹಿಸಿದ "ಏಕಪಾತ್ರಾಭಿನಯ ಮತ್ತು ಸಂಗೀತ"ಸ್ಪರ್ಧೆಯಲ್ಲಿ ಮೊದಲನೆ ಬಹುಮಾನ ಪಡೆದನು.

**2018-** ರಾಮಕೃಷ್ಣ ಮಿಷನ್ ಸ್ವಾಮಿ ವಿವೇಕಾನಂದ ಜಯಂತಿಯ ಸಂದರ್ಭ ವಾಗಿ"ವಿನಾಯಕ ರಜತ" ಪ್ರತಿಮೆಯನ್ನು ಬಹುಮಾನವಾಗಿ ಪಡೆದನು.ತಿರುಪತಿ ಫಿಲಮ್ ಸೋಸೈಟಿಯವರು ನಿರ್ವಹಿಸಿದ "ಏಕಪಾತ್ರಾಭಿನಯ"ಸ್ಪರ್ಧೆಯಲ್ಲಿ ದುರ್ಯೋ-ಧನನ ಪಾತ್ರವಹಿಸಿ ಮೊದಲನೇ ಬಹುಮಾನ ಪಡೆದನು.

ತಿರುಪತಿ ಸೈನ್ಸ್ ಸೆಂಟರ್‌ನವರು ನಿರ್ವಹಿಸಿದ "ಕಳಾ ಉತ್ಸವ" ಸ್ಪರ್ಧೆಯಲ್ಲಿ ತನ್ನ ಮೃದುಂಗದಲ್ಲಿ ಪ್ರತಿಭೆಯನ್ನು ತೋರಿಸಿ ಮೊದಲನೇ ಬಹುಮಾನ ಪಡೆದನು.

**2020-** ಸಂಸ್ಕಾರಭಾರತಿಯವರು ಆನ್‌ಲೈನ್ ಮುಖಾಂತರ ನಿರ್ವಹಿಸಿದ ರಾಜ್ಯ ಮಟ್ಟದಲ್ಲಿ ಪದ್ಯಗಳನ್ನು ಹೇಳಿ ಮೊದಲನೇ ಬಹುಮಾನ ಪಡೆದನು.

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

1) ಶ್ರೀ ಮಹಾವಿಷ್ಣುವಿನ ದಶಾವತಾರಗಳಲ್ಲಿ ಮೊದಲನೆಯ ಅವತಾರ ಯಾವುದು?

ಅ) ನರಸಿಂಹ  ಆ) ಮತ್ಸ್ಯ
ಇ) ಕೂರ್ಮ  ಈ) ಕೃಷ್ಣ

2) ಮತ್ಸ್ಯಾವತಾರ ಎಂದರೇ?

ಅ) ಮೀನು  ಆ) ಮೊಸಳೆ
ಇ) ಆಮೆ  ಈ) ಸಿಂಹ

3) 'ಮತ್ಸ್ಯ' ಅವತಾರ ನಡೆದ ಯುಗ ಯಾವುದು?

ಅ) ಕಲಿಯುಗ  ಆ) ದ್ವಾಪರಯುಗ
ಇ) ಕೃತಯುಗ  ಈ) ತ್ರೇತಾಯುಗ

4) 'ಕೂರ್ಮ' ಅವತಾರ ಎಂದರೇನು ?

ಅ) ಕೃಷ್ಣ  ಆ) ರಾಮ
ಇ) ಆಮೆ  ಈ) ಸಿಂಹ

5) 'ವರಾಹ' ಅವತಾರ ಎಂದರೇ?

ಅ) ಮೀನು  ಆ) ಆಮೆ
ಇ) ಸಿಂಹ  ಈ) ಹಂದಿ

6) 'ಜಯ ವಿಜಯ' ಯಾರು?

ಅ) ವೈಕುಂಠದ ದ್ವಾರಪಾಲಕರು  ಆ) ಕೈಲಾಸದ ದ್ವಾರಪಾಲಕರು
ಇ) ಪಾತಾಳದ ದ್ವಾರಪಾಲಕರು  ಈ) ಸ್ವರ್ಗದ ದ್ವಾರಪಾಲಕರು

7) ಜಯ ವಿಜಯರಿಗೆ ಶಾಪ ಕೊಟ್ಟವರು ಯಾರು?


ಅ) ನಾರದರು  ಆ) ವಿಶ್ವಾಮಿತ್ರ
ಇ) ದುರ್ವಾಸ  ಈ) ಸನಕ ಸನಂದಾದಿ ಮುನಿಗಳು

• • • • • • • • • • • •

ಉತ್ತರಗಳು:
1) ಆ 2) ಅ 3) ಇ 4) ಇ 5) ಈ 6) ಅ 7) ಈ

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...


ಬ್ರಹ್ಮೋತ್ಸವದಲ್ಲಿ ಬಾಲಕಿಯರು

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 30-06-2020. Regd. with the Registrar of Newspapers under
"RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

